(ಆ) ತುಮಕೂರು ಜಿಲ್ಲೆಗೆ ಸಂಬಂಧಿಸಿದಂತೆ ಸೆಪ್ಟೆಂಬರ್ ೧೯೮೭ರ ಅವಧಿವರೆಗೆ ೨೨೩ ಗ್ರಾಮ ಲೆಕ್ಕಿಗರ ವಸತಿ ಗೃಹಗಳನ್ನು ಪೂರ್ಣಗೊಳಿಸಲಾಗಿದೆ.

(ಇ) ೨೨೩ ಗ್ರಾಮಲೆಕ್ಕಿಗರಿಗೆ ವಸತಿ ಗೃಹಗಳನ್ನು ಒದಗಿಸಲಾಗಿದೆ. ಹಾಗೂ ಇನ್ನುಳಿದ ೧೯೦ ಗ್ರಾಮರಕ್ಕಿಗರಿಗೆ ವಸತಿ ಸೌಕರ್ಯವನ್ನು ಒದಗಿಸಲಾಗಿಲ್ಲ.

೧೯೮೭-೮೮ನೇ ಸಾಲಿನಲ್ಲಿ ಬರಗಾಲ ಕಾಮಗಾರಿಗಳು

೧೫೮೨. ಶ್ರೀ ಡಿ.ಟಿ. ಜಯಕೀರ್ತಿಗೌಡ (ನಂಜನಗೂಡು). — ಮಾನ್ಯ ಕಂದಾಯ ಮತ್ತು ಯೋಜನೆ ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ೧೯೮೭-೮೮ನೇ ಸಾಲಿನಲ್ಲಿ ಸರ್ಕಾರದವರು ಬರಗಾಲ ನಿಯಂತ್ರಣಕ್ಕಾಗಿ ಖರ್ಚು ಮಾಡಿದ ಹಣವೆಷ್ಟು ?

(ಆ) ಇದರಲ್ಲಿ ರಾಜ್ಯ ಸರ್ಕಾರದ ಹಾಗೂ ಕೇಂದ್ರ ಸರ್ಕಾರದ ಪಾಲೆಷ್ಟು ?

(ಇ) ಬರಗಾಲದ ಹಣ ದುರುಪಯೋಗದ ಬಗ್ಗೆ ದಾಖಲಾಗಿರುವ ಪ್ರಕರಣಗಳೆಷ್ಟು ; ಹಾಗೂ ಅಂತಹ ಪ್ರಕರಣಗಳಲ್ಲಿ ಕೈಗೊಂಡ ಕ್ರಮವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನೆ ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು). —

(ಅ) ೬೮೯.೧೧

(ಆ) ಅನುಮೋದಿತ ಬರ ಪರಿಹಾರ ಕಾರ್ಯಕ್ರಮಗಳಿಗೆ ಆದ ವೆಚ್ಚವನ್ನು ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಯೋಜನಾ ಮಂಜೂರಿ ಸಹಾಯವಾಗಿ ನೀಡುತ್ತದೆ.

(ಇ) ಹಣ ದುರುಪಯೋಗ ಕುರಿತ ಸರ್ಕಾರದ ಗಮನಕ್ಕೆ ಇಲ್ಲಿಯವರೆಗೆ ಯಾವ ಪ್ರಕರಣಗಳು ಬಂದಿರುವುದಿಲ್ಲ.

ರಾಜ್ಯದ ರೈತರುಗಳಿಗೆ ಪಾಸ್ ಬುಕ್ ನೀಡುವ ಬಗ್ಗೆ

೧೯೦೧. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ). — ಮಾನ್ಯ ಕಂದಾಯ ಮತ್ತು ಯೋಜನೆ ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ರಾಜ್ಯದಲ್ಲಿರುವ ಬ್ಯಾಂಕ್‌ಗಳಿಂದ, ಸಹಕಾರಿ ಸಂಘಗಳಿಂದ ರೈತರು ಸಾಲ ಸೌಲಭ್ಯ ಪಡೆಯಲು ಅನುಕೂಲವಾಗುವಂತೆ ಅವರ ಜಮೀನಿನ ವಿವರಗಳನ್ನೊಳಗೊಂಡು ಒಂದು ಪಾಸ್ ಬುಕ್ ಕೊಡುವ ಯೋಜನೆಯನ್ನು ಜಾರಿಗೆ ತರಲು ಸರ್ಕಾರದವರು ಉದ್ದೇಶಿಸಿದ್ದಾರೆಯೇ :

(ಆ) ಹಾಗಿದ್ದಲ್ಲಿ ಈ ಪಾಸ್ ಪುಸ್ತಕಗಳನ್ನು ಪ್ರಾಯೋಗಿಕವಾಗಿ ವಿತರಣೆ ಮಾಡಿರುವುದರ ಪರಿಣಾಮ ಮತ್ತು ಪ್ರಾರಂಭಿಸಲಾಗಿರುವ ತಾಲ್ಲೂಕುಗಳು ಯಾವುವು ;

(ಇ) ಸದರಿ ಪಾಸ್ ಬುಕ್ ವಿತರಣೆಗಾಗಿ ಕೇಂದ್ರ ಸರ್ಕಾರವು ಅನುಮತಿ ನೀಡಿದೆಯೇ ? ಮತ್ತು ಪಾಸ್ ಬುಕ್‌ನಲ್ಲಿರುವ ವಿವರಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು). —

(ಅ) ಹೌದು.